Revised User fee for the financial year 2014-15

Type of Vehicles	Fee for Single Trip (`)	Fee for multiple journey in a day (`)	Monthly pass for frequent journeys in a month (`)
Car, Jeep, Van or Light Motor Vehicle	75	115	2560
Light Commercial Vehicle, Light Goods Vehicle or Mini Bus	120	175	3930
Bus or Truck	235	355	7905
HCM, EME or MAV (three to six axles)	360	540	12000
Oversized Vehicles (seven or more axles)	470	705	15630

2013–14 ರಲ್ಲಿ ರೈತರ ಅಧ್ಯಯನ ಪ್ರವಾಸ

264(577); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ರಾಜ್ಯದಲ್ಲಿ ಕೃಷಿ ಅವಲಂಬಿತ ಕುಟುಂಬಗಳ ಸಂಖ್ಯೆ ಎಷ್ಟು;

ಆ) ರಾಜ್ಯದ ರೈತರಿಗೆ ಆಧುನಿಕ ಕೃಷಿ ಬಗ್ಗೆ ಮಾಹಿತಿ ನೀಡಲು ಹೊರ ರಾಜ್ಯಗಳಿಗೆ ಹಾಗೂ ರಾಜ್ಯದೊಳಗೆ ಅಧ್ಯಯನ ಪ್ರವಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆಯೇ;

ಇ) ಹಾಗಿದ್ದಲ್ಲಿ, 2013–14ನೇ ಸಾಲಿನಲ್ಲಿ ಎಷ್ಟು ಜನ ರೈತರನ್ನು ಹೊರ ರಾಜ್ಯ ಹಾಗೂ ರಾಜ್ಯದೊಳಗಿನ ಅಧ್ಯಯನ ಪ್ರವಾಸಕ್ಕೆ ಕಳುಹಿಸಲಾಯಿತು;

ಈ) ಇದ್ದಕ್ಕೆ ತಗುಲಿದ ವೆಚ್ಚವೆಷ್ಟು?

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) 2010–11ನೇ ಸಾಲಿನ ಕೃಷಿ ಗಣತಿ ಹಾಗೂ ಜನಗಣತಿ ಪ್ರಕಾರ, ರಾಜ್ಯದಲ್ಲಿ ಒಟ್ಟು ಕೃಷಿ ಭೂ ಹಿಡುವಳಿಗಳ ಸಂಖ್ಯೆ 78.32ಲಕ್ಷ

ಆ) ಹೌದು, ರಾಜ್ಯದ ರೈತರಿಗೆ ಆಧುನಿಕ ಕೃಷಿ ಬಗ್ಗೆ ಮಾಹಿತಿ ನೀಡಲು ಹೊರ ರಾಜ್ಯಗಳಿಗೆ ಹಾಗೂ ರಾಜ್ಯದೊಳಗೆ ಅಧ್ಯಯನ ಪ್ರವಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇ) 2013–14ನೇ ಸಾಲಿನಲ್ಲಿ ರೈತರ ಅಧ್ಯಯನ ಪ್ರವಾಸ ಯೋಜನೆಯಡಿ 246 ರೈತರನ್ನು ಮತ್ತು ಆತ್ಮ ಯೋಜನೆಯಡಿ 6232 ರೈತರನ್ನು ಒಟ್ಟು 6,478 ರೈತರನ್ನು ಹೊರ ರಾಜ್ಯಗಳಿಗೆ ಅಧ್ಯಯನ ಪ್ರವಾಸಕ್ಕಾಗಿ ಕಳುಹಿಸಲಾಗಿದೆ. ಹಾಗೂ 22,465 ರೈತರನ್ನು ಆತ್ಮ ಯೋಜನೆಯಡಿ ರಾಜ್ಯದೊಳಗಿನ ಅಧ್ಯಯನ ಪ್ರವಾಸಕ್ಕೆ ಕಳುಹಿಸಲಾಗಿದೆ.

ಈ) 2013–14ನೇ ಸಾಲಿನಲ್ಲಿ ರೈತರ ಅಧ್ಯಯನ ಪ್ರವಾಸ ಕಾರ್ಯಕ್ರಮದಡಿ ` 30.78 ಲಕ್ಷಗಳು ಮತ್ತು ಆತ್ಮ ಯೋಜನೆಯಡಿ ` 66.16 ಲಕ್ಷಗಳು, ಒಟ್ಟು 96.94ಲಕ್ಷಗಳು ರೈತರ ಹೊರ ರಾಜ್ಯಗಳ ಅಧ್ಯಯನ ಪ್ರವಾಸಕ್ಕಾಗಿ ವೆಚ್ಚವಾಗಿರುತ್ತದೆ. ರಾಜ್ಯದೊಳಗಿನ ಅಧ್ಯಯನ ಪ್ರವಾಸಕ್ಕಾಗಿ ಆತ್ಮ ಯೋಜನೆಯಡಿ ` 133.73ಲಕ್ಷಗಳು ವೆಚ್ಚವಾಗಿರುತ್ತದೆ.

ನಂದಿಬೆಟ್ಟದಲ್ಲಿ ಅಭದ್ರತೆ ಸಮಸ್ಯೆ

265(578); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಪ್ರವಾಸ ಸ್ಥಳವಾದ ನಂದಿಬೆಟ್ಟಕ್ಕೆ ಪ್ರತಿನಿತ್ಯ ಬರತಕ್ಕ ಪ್ರವಾಸಿಗರ ಸಂಖ್ಯೆ ಎಷ್ಟು;

ಆ) ಶನಿವಾರ, ಭಾನುವಾರ ಹಾಗೂ ರಜಾ ದಿನಗಳಲ್ಲಿ ಬರತಕ್ಕ ಪ್ರವಾಸಿಗರ ಸಂಖ್ಯೆ ಎಷ್ಟು;